ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರ ಏನು ಹೇಳುತ್ತದೆ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತಾರೆ.....

ಅಧ್ಯಕ್ಷರು : ಏತಕ್ಕೆ ಹೇಳಿದೆ ಎಂದರೆ, ಈ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಮುಖ್ಯಮಂತ್ರಿಗಳು ಹೇಳಬೇಕು ಅವರೂ ಇಲ್ಲ ಆದ್ದರಿಂದ ಇಲ್ಲಿರತಕ್ಕಂತಹವರು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಶೂನ್ಯ ವೇಳೆಯಲ್ಲಿ ಹೇಳಿದ್ದರಿಂದ ಪರಿಶೀಲನೆ ಮಾಡುತ್ತಾರೆಂದು ಹೇಳಿದ್ದಾರೆ.

ವಿಷಯ : ಸದನದಲ್ಲಿ ಮಂತ್ರಿಗಳ ಮತ್ತು ಆಡಳಿತ ಪಕ್ಷದ ಸದಸ್ಯರ ಹಾಜರಾತಿ ಕೊರತೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಮಂತ್ರಿಗಳನ್ನು ಸೇರಿಸಿಕೊಂಡು ಕೇವಲ 16 ಜನರಿದ್ದಾರೆ, ಇದರಲ್ಲಿ ಇಬ್ಬರೇ ಮಂತ್ರಿಗಳು, ಬೇಕಾದರೆ ತಾವು ಲೆಕ್ಕವನ್ನು ಹಾಕಿ

ಶ್ರೀ ಜೆ.ಸಿ. ಮಾಧುಸ್ವಾಮಿ: ಆ 16 ಜನರಲ್ಲಿ ಶ್ರೀ ವೈಜನಾಥ್ ಪಾಟೀಲರವರನ್ನು ಬಿಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಸತ್ಯವನ್ನೇ ಹೇಳುತ್ತೇನೆಂದು ಹೇಳಿದಿರಲ್ಲ, ಸರ್ಕಾರಕ್ಕೆ ಏನಾಗಿದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು): ಆ ಮೇಲ್ಮನೆಯಲ್ಲಿ ಸಚಿವರು ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆ ಮನೆ ಅಂದರೆ ನನಗೆ ಅರ್ಥವಾಗುತ್ತಿಲ್ಲ ದಯವಿಟ್ಟು ತಾವು ನೋಡಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಸಮಸ್ಯೆ ಏನು ಎಂದು ಹೇಳಿದರೆ ನಾವು ಉತ್ತರವನ್ನು ಕೊಡುವುದಕ್ಕೆ ಇಲ್ಲಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದು ಸಮ್ಮಿಶ್ರ ಸರ್ಕಾರದ ಹಣೆಬರಹ ಸಮ್ಮಿಶ್ರ ಸರ್ಕಾರದ ಪರಿಸ್ಥಿತಿ.

ಶ್ರೀ ಸಿದ್ದರಾಮಯ್ಯ : ನಾವು ಹಣೆಬರಹದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಣೆಬರಹದಲ್ಲಿ ನನಗೂ ನಂಬಿಕೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಅದನ್ನು ಏಕೆ ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್ : ಹಾಗಿದ್ದರೆ ಬೇಕಾದರೆ ಹಣೆಬರಹ ಎಂದು ಹೇಳಿರುವುದನ್ನು ಹಿಂದಕ್ಕೆ ತೆಗದುಕೊಳ್ಳೋಣ ಆ ವಿಚಾರವೇ ಬೇರೆ ಸ್ಪಷ್ಟವಾಗಿ ಹೇಳೋಣ ಈಗ ತಾವು ಲೆಕ್ಕವನ್ನು ಹಾಕಿ ದಯಮಾಡಿ ತಾವು ಒಂದು ಖಂಡಿತವಾಗಿ ಇಲ್ಲಿ ಮಸೂದೆಯನ್ನು ಮಂಡಿಸಿ ಏನಾದರೂ ನಿರ್ಣಯ ಮಾಡಿದರೆ ದಯವಿಟ್ಟು ಈ ಸರ್ಕಾರ ಉಳಿಯುತ್ತದೆಯೇ ಹೇಳಿ

ಶ್ರೀ ಸಿದ್ದರಾಮಯ್ಯ : ಈವಾಗಲೇ ಮಸೂದೆ ಪಾಸಾಯಿತು ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಅದು ಪಾಸಾದ ತಕ್ಷಣ ಹೊರಗಡೆ ಹೋಗಿ ಬಿಡುವುದೇ. ಬೇರೆ ಏನು ಇಲ್ಲವೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿರುತ್ತೇವೆ. ನನಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಬಗ್ಗೆ ಗೌರವ ಇದೆ ಆದರೆ ಇದು ಸರಿಯಾದುದಲ್ಲ ಇದು ಪ್ರಜಾತಂತ್ರ ವ್ಯವಸ್ಥೆಯೆ? ಎಲ್ಲಿ ಹೋದರೂ ನಿಮ್ಮ ಮಂತ್ರಿಗಳು ಯಾವ ಶಾಸಕರಾದರೂ ಇದ್ದಾರೆಯೇ ನೋಡಿ ಏನಿದು.

ಅಧ್ಯಕ್ಷರು: ಆಡಳಿತ ಪಕ್ಷದ ಶಾಸಕರು ಬಹಳ ಕಡಿಮೆ ಇದ್ದಾರೆ ಚೀಫ್‌ವಿಪ್‌ರವರು ನೋಡಿ, ನೀವು ಆಡಳಿತ ಪಕ್ಷದವರು ಜಾಸ್ತಿ ಜನರು ಇರಬೇಕು, ಅಧಿಕಾರಿಗಳು ಇರಬೇಕೆಂದು ಹೇಳುತ್ತೀರಿ ಆದರೆ ನಿಮ್ಮ ಶಾಸಕರನ್ನು ಇರಿಸುವುದಕ್ಕೆ ಆಗುವುದಿಲ್ಲವೆ? ಎಲ್ಲಾ ಶಾಸಕರಿಗೆ ಚೀಫ್‌ವಿಪ್‌ರವರು ಸೂಚನೆಯನ್ನು ಕೊಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾವು ಈ ಕಡೆ ತಿರುಗಿ ಮಾತನಾಡ ಬೇಕಾಗಿದೆ, ಶಾಸಕರು ಇಲ್ಲ ಮಂತ್ರಿಗಳು ಇಲ್ಲ ಇನ್ನು ಅಲ್ಲಿ ಏನು ಇದೆ. ಏನೂ ಇಲ್ಲ

ಅಧ್ಯಕ್ಷರು : ನಾಳೆಯಿಂದ ತುಂಬಿರುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಕ್ಕರೆ ಸಚಿವರೇ ತಾವು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ವಾಟಾಳ್ ನಾಗರಾಜ್, ನಿಮ್ಮ ಭಾಗದಲ್ಲಿ ಕುಳಿತಿರುವವರು ಕೆಲವರು ನಮ್ಮವರಿದ್ದಾರೆ. ಅವರೆಲ್ಲಾ ಇಲ್ಲವೆ? ನಮ್ಮವರು ಕೈ ಎತ್ತಿ.

ಅಧ್ಯಕ್ಷರು : ಬಹಳ ಜನ ಮಾತನಾಡುವವರು ಇರುವುದರಿಂದ ವಾಟಾಳ್ ನಾಗರಾಜ್‌ರವರೆ ಮುಂದಕ್ಕೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಈ ಕಡೆ ಕುಳಿತಿರುವವರಲ್ಲಿ ಕೆಲವರು ನಮ್ಮ ಕಡೆ ಇದ್ದಾರೆಂದು ಹೇಳಿದಿರಿ ಆ ಕಡೆಯು ಇದ್ದಾರೆ ಈ ಕಡೆಯು ಇದ್ದಾರೆ.

ಶ್ರೀ ಸಿದ್ದರಾಮಯ್ಯ : ನೀವು ಆತ್ಮಸಾಕ್ಷಿಯಾಗಿ ಹೇಳಿ ನೀವು ನಮ್ಮ ಪರ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನಾವು ನೀವು ಬಹಳ ಸ್ನೇಹಿತರು, ನಿಮ್ಮ ಪರವಾಗಿ ನಾನು ಯಾವಾಗಲೂ ಅದರ ಬಗ್ಗೆ ಏನು ತಕರಾರು ಇಲ್ಲ. ಇದಕ್ಕೆ ಆತ್ಮಸಾಕ್ಷಿ ಏಕೆ ಬೇಕು. ಎದುರಿಗೆ ಸಾಕ್ಷಿ ಮಾಡೋಣ. ಆತ್ಮಸಾಕ್ಷಿ ಏನು ಬೇಡ. ನಾವು ನಿಮ್ಮ ಪರವಾಗಿಯೇ? ಆದರೆ ಇದು ಒಳ್ಳೆಯ ರೀತಿಯ ಸಂಪ್ರದಾಯವಲ್ಲ.

ವಿಷಯ : ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಪ್ರಕಟವಾಗಿರುವ ಬಗ್ಗೆ.